


'ನಾನು ಯಾರನ್ನೂ ಗಮನಿಸಿಲ್ಲ'.

'ಹೋಗಲಿ. ನಿಮ್ಗೆ ವೇಲು ಪಿಳ್ಳೈ ಗೊತ್ತೇನು?'

ಕರಮಚಂದನ ಪ್ರಶ್ನೆಗೆ ಆತನ ಮೊಗ ಗೋಚರಿಸುವಷ್ಟು ಬಿಳಿಚಿಕೊಂಡಿತು.

'ಅವ್ನು ಇಲ್ಲಿಗೆ ಬಂದನೇ? ಹಾ ಂ . . . ಯಾರವನು?'

'ಯಾರವನು ಎಂಬುದಕ್ಕೆ ನಿಮ್ಮ ಮೊದಲಿನ ಪ್ರಶ್ನೆಯಲ್ಲೇ ಉತ್ತರವಿದೆ!' ನಕ್ಕ ಕರಮಚಂದ.

ನನಗಂತೂ ಇದೆಲ್ಲಾ ಒಗಟಾಗಿತ್ತು. ದೇವಯ್ಯನ ಮೊಗದಲ್ಲೂ ಅಚ್ಚರಿ.

'ಆ ಚೂಪು ಮುಳ್ಳುಗಳ ಶೂ! ಅದು ಬೇಟೆಗಾರರು ಬಳಸುವಂತಹದು. ಕಿಂಗ್ ಬ್ರಾಂಡಿನ ಬೀಡಿ. ಕುಟ್ಟದ ಆಸುಪಾಸಿನಲ್ಲಿ ಸಿಗುವಂತಹದು. ವ್ಯಕ್ತಿ ಅಲ್ಲಿಯವನೇ ಎಂದು ಧಾರಾಳವಾಗಿ ಹೇಳಬಹುದು ಅಥವಾ ಅಲ್ಲಿಗೆ ಹೋದವನು. ಕುಟ್ಟದ ಸಮೀಪ ದಟ್ಟವಾದ ಅರಣ್ಯಪ್ರದೇಶ. ಬೇಟೆಯಾಡಲು ಸೂಕ್ತ. ಅಂತಹ ವ್ಯಕ್ತಿ ಇಲ್ಲೇಕೆ ಬಂದ?'

ಕುಟ್ಟಪ್ಪನ ಮೋರೆ ಬಿಗಿದುಕೊಳ್ಳುತ್ತಿತ್ತು.

'ಕುಟ್ಟಪ್ಪ, ನಿಮ್ಮ ಕಪಾಟುಗಳನ್ನು ಅಲ್ಲಿರಿಸಿದ್ದೇಕೆ?'

ನಮಗೆ ಅತೀವ ಅಚ್ಚರಿ. ಕರಮಚಂದ ಹೇಳುತ್ತಿರುವುದೇನು?

'ಬಿದ್ದಪ್ಪ, ಹೊರಗಡೆ ಪಿಕಪ್ ವಾಹನದ ಚಕ್ರಗಳ ಗುರುತು ಕಂಡೆಯಲ್ಲ. ದೇವಯ್ಯ ಹೇಳಿದಂತೆ ಒಮ್ಮೆಯಷ್ಟೇ ಕುಟ್ಟಪ್ಪ ಕಪಾಟು ಹೊತ್ತುಕೊಂಡು ಹೋಗಿದ್ದಾರೆ. ಯಾವಾಗಲೋ ವಾಹನ ಹೋದ ಚಿಹ್ನೆಗಳು ಇನ್ನೂ ಇರಲು ಹೇಗೆ ಸಾಧ್ಯ? ಗುರುತನ್ನು ನೋಡಿದರೆ, ವಾಹನ ಹೋಗಿ ಹೆಚ್ಚು ಸಮಯವಾದಂತಿಲ್ಲ. ದೇವಯ್ಯ ನಮ್ಮಲ್ಲಿಗೆ ಹೋಗುತ್ತೇನೆಂದು ಹೇಳಿದೊಡನೆ ಕುಟ್ಟಪ್ಪರಿಗೆ ಅಪಾಯದ ಅರಿವಾಗಿದೆ. ಅದಕ್ಕೇ ತಕ್ಷಣವೇ ಕಪಾಟುಗಳನ್ನು ಪಿಕಪ್‌ನಲ್ಲಿ ಹಾಕಿ ಒಯ್ದಿದ್ದಾರೆ.'

'ಅಸಂಬದ್ಧ ನುಡಿಯಬೇಡಿ!' ಕುಟ್ಟಪ್ಪ ಅರಚಿದ.

'ಆದರೆ ಹೆಚ್ಚು ದೂರ ಒಯ್ದಿರುವ ಸಾಧ್ಯತೆಯಿಲ್ಲ ಯಾಕೆಂದರೆ, ವಾಹನ ನಿಲ್ಲಿಸಿ, ನಡೆದು ಹಿಂದಿರುಗಲು ಸಮಯಾವಕಾಶ ಬೇಕಲ್ಲ...'

'ಚೆನ್ನಾಗಿ ಕತೆ ಕಟ್ಟುತ್ತೀರಿ! ಪಿಕಪ್‌ನಲ್ಲಿ ಒಯ್ದಿದ್ದರೆ, ಹಿಂದಿರುಗಿ ಬರುವ ಆವಶ್ಯಕತೆ ಏನಿತ್ತು? ನಾನೇನು ನಿಮ್ಮನ್ನು ಕರೆಸಿಲ್ಲವಲ್ಲ. ನಾನಿಲ್ಲಿ ಇರುವ ಅಗತ್ಯವೂ ಇರಲಿಲ್ಲ!' ಗಹಗಹಿಸಿದ ಕುಟ್ಟಪ್ಪ

'ಹಾಗೆ ಮಾಡಬಹುದಿತ್ತು, ಆದರೂ ನೀವು ಮಾಡಿಲ್ಲ. ಯಾಕೆ? ನೀವು ಏಕಾಏಕಿ ನಾಪತ್ತೆಯಾದರೆ, ನಿಮ್ಮ ಮೇಲಿನ ಸಂಶಯ ಇನ್ನಷ್ಟು ಹೆಚ್ಚುವುದಷ್ಟೇ! ಆಗ ದೇವಯ್ಯ ಮಗ್ಗುಲಮುಳ್ಳು ಆಗಿಬಿಡುತ್ತಾನೆ. ಸಂಶಯೀ ಮಾಲಿಕ ಯಾವಾಗಲೂ ಅಪಾಯಕಾರಿ! ಬದಲಿಗೆ, ಕಪಾಟುಗಳನ್ನು ಸ್ಥಳಾಂತರಿಸಿ, ಅಂತಹ ಅನುಮಾನಕ್ಕೆ ಅವಕಾಶ ಮಾಡಿಕೊಡದಿರುವುದೇ ಜಾಣತನವಲ್ಲವೇ?'

'ನಾನೆಂಥಾ ಪೆದ್ದ! ನಿಮ್ಮ ಮಾತಿನ ಬಲೆಯಲ್ಲಿ ಸಿಕ್ಕಿಬಿದ್ದೆನಲ್ಲ! ಮಾನ್ಯ ಪತ್ತೇದಾರರೇ, ನನಗೆ ಕಪಾಟು ಅಡಗಿಸಿಡುವ ದರ್ದು ಏನಿತ್ತು? ನನ್ನ ಪಿಕಪ್ ದುರಸ್ತಿಗೆ ಹೋಗಿದೆ'.

'ಒಳ್ಳೆಯ ಪ್ರಶ್ನೆ, ಕುಟ್ಟಪ್ಪ. ದೇವಯ್ಯರ ಪತ್ನಿ ಹುಲ್ಲು ಕೊಯ್ಯಲು ಜನ ಬೇಕೇ ಎಂದು ವಿಚಾರಿಸಿದಾಗ, ನಿಮ್ಗೆ ಯಾಕೆ ಕೋಪ ಬಂದಿದ್ದು? ನೀವು ಯಾವಾಗಲೂ ಮನೆಯಲ್ಲಿ ಕನಿಷ್ಠ ದೀಪ ಬಳಸುತ್ತೀರಿ ಅಂತ ದೇವಯ್ಯ ಹೇಳಿದ್ರು. ಅದಕ್ಕೇ ದೇವಯ್ಯ ನಿಮ್ಗೆ ಒಂಟಿ ದೀಪ ಅಂತ ಹೆಸರಿಟ್ಟಿದ್ದಾರೆ! ದೀಪ ಹಾಕದಿರುವ ಉದ್ದೇಶವೇನು? ಇದಕ್ಕೆ ಎರಡು ಕಾರಣಗಳಿರಬಹುದು. ನಿಮಗೆ ಯಾವುದೋ ಅಪಾಯದ ಭಯವಿದೆ. ಹೊರಗಿನಿಂದ ನೋಡಿದವರಿಗೆ ನಿಮ್ಮ ಇರವು ಗೊತ್ತಾಗಬಾರದೆಂದು ದೀಪ ಹಾಕದಿರುವ ಸಾಧ್ಯತೆಯಿದೆ. ನೀವು ಮನೆಯ ಎಲ್ಲಾ ಕಿಟಕಿಗಳನ್ನು ಮುಚ್ಚಿಯೇ ಇಡುತ್ತೀರಿ ಅಂತಲೂ ದೇವಯ್ಯ ಹೇಳಿದರು. ಇದು ಅದಕ್ಕೆ ಪೂರಕವಾಗಿಯೇ ಇದೆ. ಇನ್ನೊಂದು, ನಿಮ್ಮ ಮನೆಯೊಳಗಿರುವ ಏನನ್ನೋ ಮುಚ್ಚಿಡುವ ಉದ್ದೇಶವಿರಬೇಕು! ನನಗನಿಸುತ್ತೆ, ಇವೆರಡೂ ನಿಜ!! ಕುಟ್ಟಪ್ಪ, ನೀವು ಹುಲ್ಲು ಕೊಯ್ದಿದ್ದು ಏಕೆಂದು ನೀವೇ ಹೇಳುತ್ತೀರೋ?'

'ನೀವು ಏನು ಹೇಳುತ್ತೀರಿ ಅಂತಲೇ ಅರ್ಥವಾಗುತ್ತಿಲ್ಲ. ಕರೆಂಟು ಉಳಿಸಲಷ್ಟೇ ನಾನು ದೀಪ ಹಾಕುತ್ತಿಲ್ಲ'.

'ಓಕೆ, ನಾನೇ ಹೇಳ್ತೀನಿ. ಅಸಲಿಗೆ ನೀವು ಪೀಠೋಪಕರಣಗಳ ವ್ಯಾಪಾರಿಯೇ ಅಲ್ಲ. ಅರಣ್ಯೋತ್ಪನ್ನಗಳ ವ್ಯಾಪಾರಿ. ನಿಮ್ಮ ಚಿಕ್ಕ ಕಪಾಟುಗಳಲ್ಲಿದ್ದುದು ಜೀವಂತ ಉಡಗಳು. ಉಡಗಳಿಗೆ ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯವಿದೆ. ಉಡಗಳಿಗೆ ಆಹಾರವಾಗಿ ಹುಲ್ಲು ಕೊಯ್ದಿದ್ದಲ್ವೇ ಕುಟ್ಟಪ್ಪ? ರಾತ್ರಿ ದೀಪ ಹಾಕದಿರುವ ಉದ್ದೇಶವೂ ಅದೇ. ಪ್ರಾಯಶಃ ರಾತ್ರಿ ಉಡಗಳನ್ನು ಕಪಾಟಿನಿಂದ ಹೊರಗಡೆ ಬಿಡುತ್ತಿದ್ದಿರಬಹುದು! ಮನೆಯೊಳಗೆ ಕಮಟು ವಾಸನೆ. ಅದೂ ಉಡಗಳಿಂದ ಉಂಟಾಗಿದ್ದು. ಇನ್ನು ಹಣೆಯಲ್ಲಾದ ಗಾಯ. ಅದು ಚೂರಿಯ ಗಾಯವಲ್ಲವೆಂದು ನೋಡುವಾಗಲೇ ಗೊತ್ತಾಗುತ್ತದೆ. ಅಷ್ಟು ಸಮಾಂತರವಾಗಿ ಗೆರೆಗಳು ಮೂಡುವುದು ಅಸಾಧ್ಯ. ಅದು ಉಡಗಳ ಉಗುರಿನಿಂದಾದ ಗಾಯಗಳು. ಉಡಗಳು ಸಾಧು ಪ್ರಾಣಿಗಳು. ಆದರೂ ಕೆಲವೊಮ್ಮೆ ಆಕ್ರಮಣ ಮಾಡುತ್ತವೆ. ಕುಟ್ಟಪ್ಪ ಆಹಾರ ಹಾಕುವಾಗ, ಅಥವಾ ಅವುಗಳನ್ನು ರಾತ್ರಿ ಹೊರಗಡೆ ಬಿಡುವಾಗ, ಅದು ಹಣೆಗೆ ಪರಚಿರಬೇಕು. ಸರಿಯಲ್ವೇ?'

ಕುಟ್ಟಪ್ಪ ಸಮ್ಮತಿಸೂಚಕವೆಂಬಂತೆ ಮೌನವಾಗಿದ್ದ.

'ನಾನು ಪಿಕಪ್ ವಾಹನವನ್ನು ಕಂಡೆ. ನೀವು ಬಹಳ ದೂರ ಹೋಗಿರುವ ಸಾಧ್ಯತೆಯಿಲ್ಲವೆಂದು ತರ್ಕಿಸಿ, ಆಸುಪಾಸಿನಲ್ಲಿ ಜಾಲಾಡಿದೆ. ಅಲ್ಲಿ ಎಸ್ಟೇಟಿನ ಗಿಡಗಳ ಮರೆಯಲ್ಲಿ ಅದು ಕಂಡಿತು. ಅದರಲ್ಲಿ ಕಪಾಟುಗಳೂ ಇದ್ದವು!'

ಅಷ್ಟರಲ್ಲಿ ಹೊರಗಡೆ ವಾಹನದ ಸದ್ದಾಯಿತು. ಬಂದಿದ್ದು ಪೊಲೀಸ್ ಜೀಪು. ಅದರಿಂದ ಇನ್‌ಸ್ಪೆಕ್ಟರ್ ವೆಲೆಂಟೈನ್ ಡಿಸೋಜ ಇಳಿಯುವುದು ಕಾಣಿಸಿತು. ಅದನ್ನು ಕಂಡು ಕುಟ್ಟಪ್ಪನ ಮೋರೆಯಲ್ಲಿ ಭೀತಿ ಕಾಣಿಸಿತು.

'ಅವರನ್ನು ನಾನೇ ಬರ ಹೇಳಿದೆ. ಬಿದ್ದಪ್ಪ, ನೀನು ಬೆಳಿಗ್ಗೆ ಕೇಳಿದೆಯಲ್ಲ, ಅನುಮಾನಾಸ್ಪದ ವ್ಯಕ್ತಿ ಎಂದರೆ ಯಾರು ಅಂತ? ಪತ್ರಿಕೆಯಲ್ಲಿ ಬಂದ ಸುದ್ದಿ. ಆತನಲ್ಲಿ ಅರಣ್ಯೋತ್ಪನ್ನಗಳಿದ್ದವು ಅಂತ ಸುದ್ದಿಯಲ್ಲಿತ್ತು. ನನ್ಗೆ ಇಲ್ಲಿಗೆ ಬಂದಾಗಲೇ ಹೊಳೆಯಿತು. ಆ ವ್ಯಕ್ತಿಗೂ, ಕುಟ್ಟಪ್ಪನಿಗೂ ನಂಟು ಇರಬಹುದೆಂದು. ಡಿಸೋಜನಿಗೆ ಕರೆ ಮಾಡಿದೆ. ಆತನಲ್ಲಿ ಕಿಂಗ್ ಬ್ರಾಂಡ್ ಬೀಡಿ ಮತ್ತು ಆತ ಧರಿಸಿದ್ದ ಶೂಗಳಲ್ಲಿ ಮುಳ್ಳುಗಳಿದ್ದವು ಅಂತ ಡಿಸೋಜ ಹೇಳಿದ. ಆತನೇ ವೇಲು ಪಿಳ್ಳೈ. ಕುಟ್ಟಪ್ಪನ ಬಗ್ಗೆ ಆತನಲ್ಲಿ ಕೇಳಲು ಹೇಳಿದಾಗ, ಆತ ತಾನು ಕುಟ್ಟಪ್ಪನನ್ನು ಕಾಣಲು ಬಂದಿಲ್ಲ ಅಂದನಂತೆ!'

'ಆ ವೇಲು ಪಿಳ್ಳೈಗೂ, ನನಗೂ ಸಂಬಂಧ ಕಲ್ಪಿಸುತ್ತೀರಿ!' ಎಂದುಕುಟ್ಟಪ್ಪ ನಕ್ಕ.

'ವೇಲು ಪಿಳ್ಳೈ ಮಣಿಮುತ್ತುವನ್ನು ನೋಡಲು ಬಂದವನಂತೆ!'

ಕುಟ್ಟಪ್ಪ ಅಚ್ಚರಿಯಲ್ಲಿ ಹುಬ್ಬೇರಿಸಿದ.

'ಕುಟ್ಟಪ್ಪ ಯಾನೆ ಮಣಿಮುತ್ತು! ಆಧಾರ್ ಕಾರ್ಡಿನಲ್ಲಿ ಪಟ ನೋಡಿದಾಗಲೇ ಅನುಮಾನ ಬಂತು. ಪಟದ ಅಂಚಿನ ಹಿಂದೆ ಇನ್ನೊಂದು ಪಟ ಗೋಚರಿಸುತ್ತಿತ್ತು! ನಿಮ್ಮನ್ನು ಕಂಡಾಗ, ಸಂಶಯ ನಿಜವಾಯಿತು. ಆಧಾರ್ ಕಾರ್ಡಿನಲ್ಲಿ ನಿಮ್ಮ ಇತ್ತೀಚಿನ ಪಟ ಬರಲು ಹೇಗೆ ಸಾಧ್ಯ? ಅಂದರೆ, ಪಟವನ್ನು ಅಂಟಿಸಿದ್ದೆನ್ನುವುದು ಸ್ಪಷ್ಟ. ಕುಟ್ಟಪ್ಪ, ಹೇಳಿ, ಪಿಳ್ಳೈ ನಿಮ್ಮನ್ನು ಹುಡುಕುತ್ತಾ ಯಾಕೆ ಬಂದ?'

ಕುಟ್ಟಪ್ಪ ಮೆಲ್ಲನೆ ಬಾಯಿ ತೆರೆದ.

'ವೇಲು ನನ್ಗೆ ಉಡ ಹಿಡ್ದು ಕೊಟ್ಟಿದ್ದ. ಅವ್ನಿಗೆ ರೊಕ್ಕ ಕೊಡೋದು ಬಾಕಿ ಇತ್ತು. ಅದಕ್ಕೆ ಇಲ್ಲಿ ಬಂದು ಅವಿತಿದ್ದೆ. ಅವ್ನು ಹುಡುಕ್ಕೊಂಡು ಬರಬಹುದು ಅನ್ನೋ ಅನುಮಾನವಿತ್ತು.'

'ಆದರೆ ಅವ್ನಿಗೆ ನೀವು ಕುಟ್ಟಪ್ಪ ಅನ್ನೋ ಹೆಸರಲ್ಲಿ ಇಲ್ಲಿ ಉಳ್ಕೊಂಡಿದ್ದು ಹೇಗೆ ಗೊತ್ತಾಯ್ತು?' ನಾನು ಕೇಳಿದೆ.

'ಹಾಂ! ನನ್ ಹೆಂಡ್ತಿ ಹೇಳಿದ್ದಳು. ಕುಟ್ಟಪ್ಪನನ್ನು ವಿಚಾರಿಸಿಕೊಂಡು ಬಂದವನು ಮೊದಲಿಗೆ ಯಾವ್ದೋ ಹೆಸರು ಹೇಳಿದನಂತೆ. ನನ್ನಾಕೆ ಗೊತ್ತಿಲ್ಲವೆಂದಾಗ ಮೊಬೈಲಿನಲ್ಲಿ ಕುಟ್ಟಪ್ಪನ ಪಟ ತೋರಿಸಿ ಕೇಳಿದನಂತೆ. ಆದರೆ ಅವ್ನಿಗೆ ಕುಟ್ಟಪ್ಪ ಇಲ್ಲಿರುವುದು ಹೇಗೆ ಗೊತ್ತಾಯಿತೆನ್ನುವುದು ಅರ್ಥವಾಗುತ್ತಿಲ್ಲ' — ಉತ್ತರಿಸಿದವನು ದೇವಯ್ಯ.

'ಅದನ್ನು ವೇಲು ಹೇಳ್ಬೇಕು. ಅದು ನಮ್ಗೆ ಸಂಬಂಧಿಸಿದ್ದಲ್ಲ. ನಾವೀಗ ಕುಟ್ಟಪ್ಪನನ್ನು ಡಿಸೋಜನ ಕೈಗೆ ಒಪ್ಪಿಸಿಬಿಡೋಣ'. ಕರಮಚಂದ ಮುಗಿಸುವಂತೆ ಹೇಳಿದ.

ಕುಟ್ಟಪ್ಪನನ್ನು ಬಂಧಿಸಲು ಸಿದ್ಧನಾಗಿಯೇ ಬಂದಂತಿದ್ದ ಡಿಸೋಜ ಒಳಗೆ ಪ್ರವೇಶಿಸಿದ.

**ಪ್ರತಿಕ್ರಿಯಿಸಿ: feedback@sudha.co.in**